ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುತ್ತಿರುವ ಜನರು ಅನಿಶ್ಚಿತತೆಯ ಬದುಕನ್ನು ನಡೆಸುತ್ತಿದ್ದಾರೆ. ಈ ಅವಘಡಗಳ ಸರಮಾಲೆಯನ್ನು ತಪ್ಪಿಸಲು 4ರಸ್ತೆಗಳಾಗಿ ಮಾರ್ಪಾಡು ಮಾಡುವುದರೊಂದಿಗೆ ಈಗಾಗಲೇ ಸಂಚರಿಸುತ್ತಿರುವ ರೈಲ್ವೆಯನ್ನು ಮಂಗಳೂರಿನಿಂದ ಬೈಂದೂರುರವರೆಗೆ ಕಛೇರಿ ಸಮಯದಲ್ಲಿ ದಿನಕ್ಕೆ ಪ್ರತಿ ಗಂಟೆಗೊಮ್ಮೆಸಂಚರಿಸುವಂತೆ ಕೇಂದ್ರ ಸರ್ಕಾರದ ಮೂಲಕ ರೈಲ್ವೆ ಇಲಾಖೆಯನ್ನು ಮನವೊಲಿಸುವಲ್ಲಿ ರಾಜ್ಯ ಸರ್ಕಾರವು ತುರ್ತು ಕ್ರಮ ಕೈಗೊಂಡು ಹೆಚ್ಚುವರಿ ರೈಲು ಸಂಚಾರದ ವ್ಯವಸ್ಥೆ ಮಾಡಬೇಕೆಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟಾರೆ 152 ಕಿ.ಮೀ. ರಾಷ್ಟ್ರೀಯ ಹೆದ್ದಾರಿ 17 ಹಾದು ಹೋಗುತ್ತದೆ. ಹೆದ್ದಾರಿಯು ಎರಡು ಪಥ ರಸ್ತೆಯಾಗಿರುತ್ತದೆ. ಹೆಚ್ಚುತ್ತಿರುವ ವಾಹನಗಳ ಸಾಂದ್ರತೆಯನ್ನು ಗಮನಿಸಿ ಕೇರಳ ಗಡಿಯಿಂದ ಬೈಂದೂರಿನವರೆಗೆ (ಒಟ್ಟಾರೆ 137 ಕಿ.ಮೀ) ನಾಲ್ಕು ಪಥಗಳ ರಸ್ತೆಯನ್ನಾಗಿ ವಿಸ್ತರಿಸಲು ಪಂಚವಾರ್ಷಿಕ ಯೋಜನೆಯಡಿಯಲ್ಲಿ, ಪರಿಗಣಿಸಲು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಕೊಂಕಣ ರೈಲ್ವೆಯು ಈಗಾಗಲೇ ಮಂಗಳೂರಿನಿಂದ ಕುಂದಾಪುರದವರೆಗೆ ರೈಲ್ವೆ ಸಂಚಾರವನ್ನು ಆರಂಭಿಸಿದ್ದು, ಬೈಂದೂರಿನವರೆಗೆ ಇಷ್ಟರಲ್ಲೆ ವಿಸ್ತರಿಸುವ ಸಂಭವ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಕಾಮಗಾರಿಯು ಪೂರ್ಣಿಸಿ ರೈಲ್ವೆ ಸಂಚಾರ ಆರಂಭವಾದ ನಂತರ ಸಂಚಾರದ ಸಾಂದ್ರತೆ ಪರಿಗಣಿಸಿ ಹೆದ್ದಾರಿಯ ರೈಲ್ವೆ ಓಡಾಟವನ್ನು ಸಹ ಹೆಚ್ಚಿಸುವ ಬಗ್ಗೆ ಕೇಂದ್ರ ಸರ್ಕಾರದ ಮೂಲಕ ರೈಲ್ವೆ ಇಲಾಖೆಯನ್ನು ಒತ್ತಾಯಿಸಲಾಗುವುದು.

ವಿಷಯ (ಉ): ಶಿಕ್ಷಕರನ್ನು ಗಣತಿ ಮತ್ತು ಹಸಿರು ಕಾರ್ಡಿನ ಪರಿಶೀಲನಾ ಕೆಲಸವನ್ನು ತೊಡಗಿಸಿರುವುದು.

ಶ್ರೀ ರಾಜಶೇಖರ ವಿ. ಶೀಲವಂತ:- (ಗುಳೇದಗುಡ್ಡ) ಮಾನ್ಯ ಅಧ್ಯಕ್ಷರೆ, ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ಪಾತ್ರ ಹೆಚ್ಚಾಗಿದ್ದು ಜವಾಬ್ದಾರಿ ಹೆಚ್ಚುತ್ತಾ ಹೋಗುತ್ತಿದೆ. 7ನೇ ಕ್ಲಾಸಿನ ವಿದ್ಯಾರ್ಥಿಗಳಿಗೆ ಈ ವರ್ಷದಿಂದ ಸಾರ್ವತ್ರಿಕ ಪರೀಕ್ಷೆಗಳು ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಗಮನಿಸಿ, ಶಿಕ್ಷಕರಿಗೆ ಸರಕಾರ ಗಣತಿ ಕೆಲಸ, ಹಸಿರು ಕಾರ್ಡಿನ ಪರಿಶೀಲನಾ ಕೆಲಸ ಮುಂತಾದ ಕೆಲಸದಲ್ಲಿ ತೊಡಗಿಸುವುದು ವಿದ್ಯಾರ್ಥಿಗಳಿಗೆ ಪರೋಕ್ಷವಾಗಿ ತೊಂದರೆ ಕೊಟ್ಟಂತಾಗುತ್ತದೆ. ಕಾರಣ ಬೇರೆ ಬೇರೆ ಇಲಾಖೆಯಲ್ಲಿ ಹೆಚ್ಚು ಕೆಲಸ ಇಲ್ಲದ ಅಥವಾ ಸ್ವಯಂ ಸೇವಾ ಸಂಸ್ಥೆಗಳಿಂದ ಈ ಕೆಲಸ ಮಾಡಿಸಬಹುದಾಗಿದೆ. ಈ ವಿಷಯ ಸಭೆಯು ಮುಂದೆ ತರುತ್ತೇನೆ. ಈ ವಿಷಯವಾಗಿ ಯೋಗ್ಯ ಕ್ರಮ ಕೈಕೊಳ್ಳಲು ವಿನಂತಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಪರವಾಗಿ, ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಪ್ರಾಥಮಿಕ ಶಾಲಾ ಶಿಕ್ಷಕರನ್ನು ಜನಗಣತಿ, ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗ, ಆರ್ಥಿಕ ಹಿಂದುಳಿದ ವರ್ಗಗಳ ಜನಗಣತಿ, ಮತದಾರರ ಪಟ್ಟಿ ಪರಿಷ್ಕರಣೆ, ಹಸಿರು ಕಾರ್ಡಿನ ಪರಿಶೀಲನಾ ಕಾರ್ಯ ಮುಂತಾದ ಗಣತಿ ಕೆಲಸ ಕಾರ್ಯಗಳಿಗೆ ಆಯಾ ಗಣತಿ ಸಮಯದಲ್ಲಿ ನಿಯೋಜಿಸಲಾಗುತ್ತಿದೆ. ಈ ರೀತಿ ನಿಯೋಜಿಸಲ್ಪಟ್ಟ ಶಿಕ್ಷಕರು ಗಣತಿ ಸಮಯದಲ್ಲಿ ಬಹುಮಟ್ಟಿಗೆ ಬೆಳಗಿನ ಅಥವಾ ಸಂಜೆ ಅವಧಿಯಲ್ಲಿ ಈ ಕಾರ್ಯಗಳನ್ನು ಕೈಗೊಳ್ಳುತ್ತಿರುವರು. ಆದರೂ ಈ ರೀತಿಯ ಬೇರೆ ಬೇರೆ ಇಲಾಖೆಯ ಕೆಲಸಗಳಿಗೆ ಶಿಕ್ಷಕರನ್ನು ನಿಯೋಜಿಸುವುದರಿಂದ, ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ಸ್ವಲ್ಪ ಮಟ್ಟಿಗೆ ತೊಂದರೆಯಾಗುತ್ತಿದೆ. ಕಡ್ಡಾಯ ಪ್ರಾಥಮಿಕ ಶಿಕ್ಷಣವು ಪ್ರಮುಖ ಅಂಶವಾಗಿದ್ದು, ವಿವಿಧ ಗಣತಿ ಕಾರ್ಯಗಳಿಗೆ ಶಿಕ್ಷಕರನ್ನು ನಿಯೋಜನೆ ಮಾಡುವುದರಿಂದ, ಬೋಧನಾ ಕೊರತೆಯುಂಟಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಸ್ವಲ್ಪ ಮಟ್ಟಿಗೆ ಕುಂದುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸಲ 7ನೇ ತರಗತಿ ಪಬ್ಲಿಕ್ ಪರೀಕ್ಷೆಯನ್ನಾಗಿ ನಡೆಸಲಾಗುತ್ತಿದ್ದು, 'ಹಸಿರು ಕಾರ್ಡ್' ಪರಿಶೀಲನಾ ಕಾರ್ಯಗಳಿಗಾಗಿ ಹಿರಿಯ ಪ್ರಾಥಮಿಕ ಶಾಲೆಗಳಿಂದ ಒಬ್ಬರು ಶಿಕ್ಷಕರನ್ನು ಮಾತ್ರ ನಿಯೋಜಿಸಲು ಇಲಾಖಾ ಸುತ್ತೋಲೆ ನೀಡಲಾಗಿದೆ. ಉಳಿದ ಶಿಕ್ಷಕರು ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ, ಪಾಠ ಪ್ರವಚನಗಳು ಕ್ರಮವಾಗಿ ನಡೆಯುತ್ತಿವೆ.

ಆಯಾ ಇಲಾಖೆಯ ಗಣತಿ ಕಾರ್ಯವನ್ನು ಸಂಬಂಧಿಸಿದ ಇಲಾಖಾ ನೌಕರರಿಂದ ಇಂತಹ ಗಣತಿ ಮಾಡಿಸಿದಲ್ಲಿ ವಿದ್ಯಾರ್ಥಿಗಳಿಗೆ ಉಂಟಾಗುವ ಬೋಧನಾ ಕೊರತೆಯನ್ನು ನೀಗಿಸಬಹುದಾಗಿರುತ್ತದೆ.

ವಿಷಯ: (ಊ) ಉಳ್ಳಾಲ ವಿಧಾನಸಭಾ ಕ್ಷೇತ್ರಕ್ಕೊಳಪಟ್ಟ ಸೋಮೇಶ್ವರ ಗ್ರಾಮ ಪಂಚಾಯತ್ ಕುರಿತು.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ): ಉಳ್ಳಾಲ ವಿಧಾನ ಸಭಾಕ್ಷೇತ್ರಕ್ಕೊಳಪಟ್ಟ ಸೋಮೇಶ್ವರ ಗ್ರಾಮಪಂಚಾಯತ್ ಕಲೆದ 5 ವರ್ಷಗಳಿಂದ ಸರ್ಕಾರಿ ಆಜ್ಞೆ ಪ್ರಕಾರ ಅಧಿಸೂಚಿತ ಪ್ರದೇಶವೆಂದು ಘೋಷಿಸಲ್ಪಟ್ಟಿದ್ದರೂ ಅಭಿವೃದ್ಧಿ ಪ್ರದೇಶ ವಂಚಿತಗೊಂಡಿದೆ, ಸರ್ಕಾರ ಇತ್ತೀಚೆಗೆ ನಗರ ಪಾಲಿಕೆ, ನಗರ ಸಭೆಗಳಿಗೆ ಚುನಾವಣೆ ನಡೆಸಿದಾಗ, ಈ ಗ್ರಾಮವನ್ನು, ಗ್ರಾಮ ಪಂಚಾಯತ್ ಮಾಡದೆ, ನಗರಸಭೆಯನ್ನಾಗಿ ಮಾಡದೆ ಇಲ್ಲಿನ ನಿವಾಸಿಗಳಿಗೆ ಅನ್ಯಾಯವೆಸಗಿದೆ. ಪರಿಣಾಮವಾಗಿ ಶ್ರೀಸಾಮಾನ್ಯನಿಗೆ ಸಿಗುವ ಸೌಲಭ್ಯಗಳು, ಅಭಿವೃದ್ಧಿ ಕಾರ್ಯಗಳು, ಸ್ಥಗಿತಗೊಂಡಿದೆ. ಚುನಾಯಿತ ಪ್ರತಿನಿಧಿಗಳು ಇಲ್ಲದೆ, ಮೂಲಭೂತ ಅವಶ್ಯಕತೆಗಳಾದ, ಕುಡಿಯುವ ನೀರು, ರಸ್ತೆಗಳು, ಶೌಚಾಲಯಗಳು-ಇದರಿಂದ ಜನರು ವಂಚಿತರಾಗಿರುವರು, ಸರ್ಕಾರಿ ಅಧಿಕಾರಿಗಳು ಶ್ರೀ ಸಾಮಾನ್ಯನ ಶೋಷಣೆ ಮಾಡುತ್ತಿರುವರು. ಆದುದರಿಂದ ಸೋಮೇಶ್ವರ ಅಧಿಸೂಚಿತ